


## ದೋನಿ ಅಭಿನಂದನಾರ್ಹರು

‘ಕ್ಯಾಪ್ಟನ್ ಕೂಲ್ ಟಾಟಾ’, ಬಿ.ಎಂ. ಹನೀಫ್ ಅವರ ಮುಖಪುಟ ಲೇಖನ (ಸುಧಾ, ಜ. 19) ಓದಿ ದೋನಿ ಅವರ ಬಗ್ಗೆ ಹೆಮ್ಮೆ ಎನಿಸಿತು. ತಂಡದ ಸದಸ್ಯರಿಗೆ ಬರೀ ಬೋಧನೆ ಮಾಡದೆ ಸಾಣೆ ಮಾಡಿ ತೋರಿಸಿದ್ದು ದೋನಿ ಅವರ ನಾಯಕತ್ವದ ಗುಣವನ್ನು ಎತ್ತಿತೋರಿಸಿದೆ. ಬೇಡಿಕೆಯಲ್ಲಿರುವಾಗಲೇ ವಿದಾಯ ಹೇಳಿ ಬೇರೆಯವರಿಗೆ ಅವಕಾಶ ಕಲ್ಪಿಸಿಕೊಟ್ಟಿರುವ ದೋನಿ ಅಭಿನಂದನಾರ್ಹರು.

—ಸು.ವಿಜಯಲಕ್ಷ್ಮಿ ಶಿವಮೊಗ್ಗ, ಅಮೃತೇಶ್ ತಂಡರ, ಪಿ.ಎ. ಸುಧೀಂದ್ರ ಬೆಂಗಳೂರು, ಡಾ.ಕೆ.ಕೆ. ಜಯಚಂದ್ರಗುಪ್ತ ಹಾಸನ, ಮುಕುಂದ ಹೆರಕಲ್ಲ ಕಲಬುರಗಿ, ಎಸ್.ಚನ್ನಪ್ಪ ಮೈಸೂರು

## ಸಮಂಜಸ ಬರಹ

‘ನಿಮ್ಮೊಡನೆ’ಯಲ್ಲಿ ‘ಬೆಂಗಳೂರು ಸುರಕ್ಷಿತ ಅಲ್ಲವೇ?’ (ಬಿ.ಎಂ. ಹನೀಫ್) ಬರಹದಲ್ಲಿ ಅಪರಾಧ ಬಗ್ಗೆ ವಿವರಿಸಿದ್ದು ಸಮಂಜಸವಾಗಿದೆ. ಅತ್ಯಾಚಾರಿಗಳಿಗೆ ಕಠಿಣ ಶಿಕ್ಷೆಯಾಗಬೇಕು. ಇಂದು ಯಾವ ನಗರವೂ ಸುರಕ್ಷಿತವಲ್ಲ.

—ಮಹಾವೀರ ಕಾಸರ ಶಿವಮೊಗ್ಗ, ಎಂ.ಮೃತ್ಯುಂಜಯಪ್ಪ ಚಿತ್ರದುರ್ಗ, ಎಂ.ಎಸ್. ಧರ್ಮೇಂದ್ರ ದೊಡ್ಡಮಗ್ಗೆ, ಎಚ್.ಆನಂದಕುಮಾರ್ ಚಿತ್ರದುರ್ಗ, ಶ್ರೀನಾಥ್ ಕೊನೇಟಿ ಬೆಂಗಳೂರು

## ಅರ್ಥಪೂರ್ಣ

ವಿಚಾರ ಲಹರಿಯಲ್ಲಿ ‘ಜಾತಿ ವ್ಯವಸ್ಥೆಯ ವಿಶ್ಲೇಷಣೆ’ (ಮೂಚಿ) ಅರ್ಥಪೂರ್ಣವಾಗಿದೆ. ಈಗಿನ ಸಮಾಜದ ಜಾತಿ ವ್ಯವಸ್ಥೆಯ ರೀತಿ–ರಿವಾಜುಗಳನ್ನು ಬದಲಿಸಿಕೊಳ್ಳಲು ಸಾಧ್ಯ ಎಂಬುದನ್ನು ನಿರೂಪಿಸಿದೆ.

—ಸುಂದರ್ ಬೆಂಗಳೂರು

## ಪ್ರವಾಸ ಲೇಖನ ಕುತೂಹಲಕಾರಿ

‘ಛತ್ರಪತಿಯ ಕೋಟೆಯಲ್ಲಿ..’ (ಹರವು ದೇವೇಗೌಡ) ಪ್ರವಾಸ ಲೇಖನ ಮತ್ತು ಚಿತ್ರಗಳು ಬಹಳ ಚೆನ್ನಾಗಿವೆ. ಲೇಖನ ಓದಿದ ಮೇಲೆ ಒಮ್ಮೆ ಪ್ರತ್ಯಕ್ಷವಾಗಿ ನೋಡಬೇಕೆನಿಸಿದೆ. ಶಿವಾಜಿ ಸೈನ್ಯದಲ್ಲಿ 12 ಜನ ಮುಸ್ಲಿಮರು ಸೇನಾಪತಿ ಗಳಾಗಿದ್ದರು. ಅಫಜಲಖಾನನನ್ನು ಎದುರಿಸು ವಾಗ ಹುಲಿಯ ಉಗುರುಗಳನ್ನೇ ಧರಿಸಲು ಸೂಚಿಸಿದ ಅಂಗರಕ್ಷಕ ಗೂಢಚರನೂ ಸಹ ಮುಸ್ಲಿಮನೇ ಆಗಿದ್ದ ಎಂಬ ವಿಷಯ ಕುತೂಹಲಕಾರಿ.

—ಕೃಷ್ಣ ಜೋಶಿ ಧಾರವಾಡ, ಕೊಹಿಮ ಬಸರಕೋಡು, ಕೋಟೇಶ್ವರ ಸೂರ್ಯನಾರಾಯಣರಾವ್ ಬೆಂಗಳೂರು

## ಕಥೆಗಳು ಚೆನ್ನಾಗಿವೆ

‘ತೇರಾ ಏರಿ ಅಂಬರದಾಗೆ’ ಕಥೆ (ಕಿರಣ್‌ಪ್ರಸಾದ್ ರಾಜನಹಳ್ಳಿ) ಮತ್ತು ಮಿನಿಕಥೆ ‘ಕಟೌಟ್’ (ಪಿ.ಜೆ. ರಾಘವೇಂದ್ರ) ಎರಡೂ ಬಹಳ ಚೆನ್ನಾಗಿವೆ.

—ರಾಜಶೇಖರ ಹಾದಿಮನಿ ಧಾರವಾಡ

## ಮಾಹಿತಿಪೂರ್ಣ

‘ರಕ್ತದಾನ ಮಾಡುತ್ತೀರಾ..?’ (ಡಾ.ಪಿ.ಜಿ. ಶಿವಾನಂದ್) ಲೇಖನ ಮಾಹಿತಿಪೂರ್ಣವಾಗಿದೆ. ರಕ್ತದಾನ ಮಹಾದಾನ. ಇನ್ನೊಂದು ಜೀವ ಉಳಿಸುವ ಮಹತ್ಕಾರ್ಯ ಇದಾಗಿರುತ್ತದೆ. ರಕ್ತದಾನ ಮಾಡಿದರೆ ನಿಶ್ಶಕ್ತಿ ಉಂಟಾಗುತ್ತದೆ ಎಂಬ ಅನೇಕರ ತಪ್ಪು ಕಲ್ಪನೆಯನ್ನು ಲೇಖನ ತೊಡೆದುಹಾಕಿತು.

—ಮಧುರಾ ಸುಬ್ರಹ್ಮಣ್ಯ ಬೆಂಗಳೂರು, ಬಿ.ಎಂ.ಶಿವಲಿಂಗೇಗೌಡ ಬೇವಿನಹಳ್ಳಿ, ನಾರಾಯಣಯಾಜಿ ಶಿರಾಲಿ, ಗಾಣಧಾಳು ರಾಮಣ್ಣ ಚಿತ್ರದುರ್ಗ

## ಸರ್ಕಾರ ಪ್ರೋತ್ಸಾಹಿಸಬೇಕು

‘ವಿದೇಶೀ ಹಲಸಿಗೆ ಸಕ್ರೆಬೈಲ್ ಕಸಿ’ (ವಿ.ಬಾಲಕೃಷ್ಣ ಶಿರ್ವ) ಲೇಖನ ಚೆನ್ನಾಗಿದೆ. ಕೃಷ್ಣೇಗೌಡರ ಅದ್ಭುತ ಸಾಧನೆಗೆ ಎಲ್ಲರಿಗೂ ಮಾದರಿ. ಸರ್ಕಾರ ಇಂಥ ಸಾಧನೆ ಮಾಡುತ್ತಿರುವ ಸಾಹಸಿಗಳನ್ನು ಗುರುತಿಸಿ, ಪ್ರೋತ್ಸಾಹಿಸಬೇಕು.

ಮೇ.ಗೋ. ಸುಬ್ಬಣ್ಣ ಮೇಗರವಳ್ಳಿ

## ಬುದ್ಧಿಮಾತಿನಂತಿದೆ

‘ಕ್ಷಮಾದಾನ ಮತ್ತು ಕ್ಷಮಯಾಚನೆ’ (ಲಾವಣ್ಯಗೌರಿ ವೆಂಕಟೇಶ್) ಲೇಖನವು ‘ತಪ್ಪು ಮಾಡುವುದು ಮತ್ತು ಕ್ಷಮೆ ಯಾಚಿಸದೆ ಅಹಂಕಾರ ತೋರುವವರಿಗೆ ಹಾಗೂ ಬೇರೆಯವರು ತಪ್ಪು ಮಾಡಿದಾಗ ಕ್ಷಮಿಸುವ ಸೌಜನ್ಯ ತೋರದೆ ದ್ವೇಷ ಸಾಧಿಸುವವರಿಗೆ ಬುದ್ಧಿಮಾತಿನಂತಿದೆ’.

—ಎಚ್.ಎಸ್.ರಾಘವೇಂದ್ರ, ಬೆಂಗಳೂರು, ಬಾಳ್ಳುಪೇಟೆ ನೀಲಕಂಠಪ್ಪ ಹಾಸನ

## ತಪ್ಪುಗಳು ಬಂದಿವೆ..

ಜನವರಿ 5ರ ಸಂಚಿಕೆಯಲ್ಲಿ ‘2016 ಸಂಭ್ರಮ, ವಿಷಾದ, ನಿಷೇಧ’ (ಬಿ.ಎಂ. ಹನೀಫ್) ಮುಖಪುಟ ಲೇಖನದ ಬಾಕ್ಸ್ ಸುದ್ದಿಯಲ್ಲಿ ಒಂದು ತಪ್ಪು ನುಸುಳಿದೆ. ಬೊಳುವಾರು ಮಹಮ್ಮದ್ ಕುಂಞ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದದ್ದು ‘ಕೇಂದ್ರ ಜ್ಞಾನಪೀಠ ಪ್ರಶಸ್ತಿ’ ಎಂದು ನಮೂದಾಗಿದೆ. ಈಗ್ಗೆ ಎರಡು ತಿಂಗಳ ಹಿಂದೆ ಅರಳುಗುಪ್ಪೆ ದೇವಾಲಯದ ಕುರಿತ ಲೇಖನ (ಶಶಿರೇಖಾ ನಾಗೇಂದ್ರ) ಪ್ರಕಟವಾಗಿದ್ದು, ಅದರಲ್ಲಿ ದೇವಾಲಯದ ಭುವನೇಶ್ವರಿಯಲ್ಲಿ ನಟರಾಜನ ಮೂರ್ತಿ ಇದೆ ಎಂದು ಬರೆಯಲಾಗಿತ್ತು. ಆದರೆ ನಟರಾಜನ ಮೂರ್ತಿ ಇರುವುದು ಗಂಗರ ಕಾಲದ ಶಿವಾಲಯದಲ್ಲಿ.

ದಯವಿಟ್ಟು ಇಂತಹ ತಪ್ಪುಗಳ ಬಗ್ಗೆ ಗಮನ ಕೊಡಿ. ‘ಸುಧಾ’ದಂತಹ ಪ್ರತಿಷ್ಠಿತ ಪತ್ರಿಕೆಯಲ್ಲಿ ತಪ್ಪುಗಳು ಬರಬಾರದು.

—ಬಿ.ಎಂ.ಚಂದ್ರಶೇಖರಯ್ಯ, ಬೆಂಗಳೂರು



